ಹೀಗೆ ಇದು ವಿವಿಧ ಅಂಶಗಳನ್ನು ಒಳಗೊಂಡಿದೆ. ಕನ್ನಡದ ಕೆಲವು ಕಾದಂಬರಿಗಳಲ್ಲಿ ವಾಗ್ವಿಲಾಸವೂ ಎದ್ದು ಕಾಣುತ್ತದೆ. ಇಲ್ಲಿಯೂ ನಾವು ಗದ್ಯದ ಶೈಲಿ ಮತ್ತು ಪದ್ಯದ ಶೈಲಿಯನ್ನು ಕಾಣಬಹುದಾಗಿದೆ. ಕಾದಂಬರಿಯನ್ನು ಚರ್ಚೆ ಮಾಡುವಾಗ ಅನೇಕರು ಅದರ ಆಶಯ ಮತ್ತು ಅದರ ವಿಚಾರವನ್ನು ಮಾತ್ರ ಹೇಳುತ್ತಾರೆ. ಮತ್ತೆಮತ್ತೆ ಬಂದ ಒಂದು ಮುಖ್ಯವಾದ ಚರ್ಚೆಯೆಂದರೆ, ಮಹಾಕಾವ್ಯ ಮತ್ತು ಕಾದಂಬರಿಗೆ ಇರುವ ಸಂಬಂಧದ ವಿವರಣೆಗಳು. ಇದು ಈ ದೃಷ್ಟಿಯಿಂದ ಅನನ್ಯವಾದ ಒಂದು ಮಹಾಕಾವ್ಯದಂತಿದೆ. ದೊಡ್ಡತಾಯಿಯ ಇಡೀ ಜೀವನದ ಕಥನವನ್ನು ಇದು ಅರ್ಥಪೂರ್ಣವಾಗಿ ಕಟ್ಟಿಕೊಡುತ್ತದೆ. ಇದರಲ್ಲಿನ ಅಸಂಖ್ಯ ಅನುಭವಗಳು ನಮಗೆ ನಿರ್ದಿಷ್ಟ ಪ್ರದೇಶ ಮತ್ತು ಜೀವನಕ್ರಮಗಳ ಸಂಬಂಧಗಳನ್ನು ಹೇಳುತ್ತವೆ.

ಸಾಹಿತ್ಯದಲ್ಲಿ ಇವತ್ತು ಯಾವುದನ್ನು ವಾಸ್ತವ ಎಂದು ಹೇಳುತ್ತೇವೆಯೋ ಅದು ಕೂಡ ಒಂದು ನಿರ್ದಿಷ್ಟವಾದ ನಿರೂಪಣೆಯನ್ನು ಹೇಳುತ್ತದೆ. ನಿರೂಪಣೆಯ ಕಣ್ಣಿಗೆ ಯಾವುದು ದಕ್ಕಿದೆಯೋ ಅಷ್ಟು ಮಾತ್ರವೇ ವಾಸ್ತವ ಎಂದು ಹೇಳುತ್ತಾರೆ. ಮತ್ತೊಂದು ಬಗೆಯಲ್ಲಿ ಹೇಳುವುದಾದರೆ, ವಾಸ್ತವ ಎನ್ನುವುದು ಇಂದು ಒಂದು ಹಗಲುಗನಸಿನ ಥರ ಕಾಣಿಸುತ್ತದೆ. ವಾಸ್ತವ ಕಣ್ಣಿಗೆ ಕಾಣುವುದು ಸತ್ಯ. ಆದರೆ, ಈ ಸತ್ಯವನ್ನು ನಾವು ನಮಗೆ ಕಂಡ ರೀತಿಯಲ್ಲಿ ನೋಡುತ್ತೇವೆ, ಅಷ್ಟು ಮಾತ್ರವೇ ನಿರೂಪಣೆಗೆ ದಕ್ಕುತ್ತದೆ. ಉಳಿದವು ದಕ್ಕುವುದಿಲ್ಲ ಎಂದು ಅರ್ಥವಲ್ಲ. ಇದು 'ದೊಡ್ಡತಾಯಿ'ಯಲ್ಲಿ ಕಂಡು ಬರುವ ಮಹತ್ವದ ಸಂಗತಿ.

ಈ ಕಾದಂಬರಿಗೆ ಆಂತರಿಕ ತರ್ಕವಿದೆ. ಅದು ಬೆಳೆಯುತ್ತಾ ಹೋಗುತ್ತದೆ. ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆ ಎರಡನ್ನೂ ಕಾದಂಬರಿಯ ಜಗತ್ತು ಒಳಗೊಳ್ಳುತ್ತದೆ. ಕಾದಂಬರಿಗಳಲ್ಲಿ ಬರುವ ಅನೇಕ ಸಂಗತಿಗಳನ್ನು ವೈಜ್ಞಾನಿಕ ಅಥವಾ ಅವೈಜ್ಞಾನಿಕ ಎಂದು ಕರೆಯಲು ಬರುವುದಿಲ್ಲ. ಅವುಗಳಲ್ಲಿ ಅಸ್ತಿತ್ವದ ಅನನ್ಯತೆ ಇರುವವರು ಅಥವಾ ಇಲ್ಲದೇ ಇರುವವರು ಎಂದು ವರ್ಗೀಕರಿಸಲು ಬರುವುದಿಲ್ಲ. ಹೀಗಾಗಿ, ದೊಡ್ಡತಾಯಿ ಮತ್ತು ದ್ಯಾಮವ್ವ, ಮಾದಣ್ಣ, ಚಂದವ್ವ, ಅವ್ವಣ್ಣಿ ಮುಂತಾದ ಪಾತ್ರಗಳಿಗೆ ಅವುಗಳದೇ ಆದ ಅನನ್ಯತೆಗಳಿವೆ. ಇದನ್ನು ವೇದಾ ಅವರಂತಹ ಲೇಖಕಿಯರು ಮಾತ್ರವೇ ಚಿತ್ರಿಸಬಲ್ಲರು. ಹಾಗಾಗಿ, ಬದುಕನ್ನು ಸಮರ್ಥವಾಗಿ ಎದುರಿಸುವ ಚಂದವ್ವ, ಬಸಕ್ಕ, ಗೌರಿ, ಚಿಕ್ಕತಾಯಿಯರಲ್ಲಿ ನಾವು ನಮ್ಮ ಸಮಾಜದ ಹೆಣ್ಣುಮಕ್ಕಳ ಕಥನವನ್ನು ಕಾಣಬಹುದು.

ಮನುಷ್ಯನ ಅನುಭವ ಮತ್ತು ಹೊರ ಪ್ರಪಂಚದ ಅರ್ಥ ಎರಡೂ ಇದರಲ್ಲಿದೆ. ಕಾದಂಬರಿ ಎನ್ನುವುದು ಅನೇಕ ಸಂದರ್ಭದಲ್ಲಿ ನೈತಿಕ ವ್ಯಾಖ್ಯಾನವೂ ಹೌದು. ದೊಡ್ಡತಾಯಿ ಇಲ್ಲಿ ತನ್ನ ಅನುಭವದ ಮೂಲಕ ಲೋಕವನ್ನು ವ್ಯಾಖ್ಯಾನಿಸುತ್ತಾಳೆ. ಕಾದಂಬರಿಯಲ್ಲಿ ಪ್ರದೇಶ, ಕಾಲ, ಕ್ರಿಯೆ ಮುಂತಾದವುಗಳು ಭಿನ್ನವಾಗಿವೆ. ವಸ್ತು ಮತ್ತು ಪಾತ್ರಗಳ ವಿಶಿಷ್ಟತೆಯಿಂದಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಅದು ಕಂಡುಕೊಂಡಿದೆ. ಅದರ ಜೊತೆಗೆ ವೇದಾ ಅನೇಕ ಕಡೆಗೆ ರೂಪಕದಂತಹ ಮಾತುಗಳನ್ನು ಬಳಸಿರುವುದು ಗಮನಾರ್ಹ.

ಈ ಕಾದಂಬರಿ ಪರೋಕ್ಷವಾದ ಒಂದು ಜೀವನ ವಿಧಾನವನ್ನು ದಾಖಲಿಸುತ್ತಿದೆ ಎನ್ನುವುದನ್ನು ನಾವು ಮರೆಯಕೂಡದು. ಇಲ್ಲಿ ಬರುವ ಕೆಲವು ಪಾತ್ರಗಳು ಕತೆಯೊಂದರ ಪಾತ್ರಗಳಾಗಿ ಮಾತ್ರವೇ ಉಳಿದಿಲ್ಲ. ಅವು ಜೀವನದ ನೆರಳುಗಳೂ ಹೌದು. ಹೀಗಿದ್ದರೂ ಇದು ಎಲ್ಲಾ ಮುಖ್ಯವಾದ ಸಂಗತಿಯನ್ನು ಹೇಳುತ್ತದೆ ಎಂದು ಭಾವಿಸಬಾರದು. ಇಲ್ಲಿ ಕೆಲವು ಕಡೆಗಳಲ್ಲಿ ಅತಿಯಾದ ನಿರೂಪಣೆಗಳು ಇವೆ (ಪು. 111, 157, 194). ಇದೇನೇ ಇದ್ದರೂ ಚರಿತ್ರೆ, ಅವಕಾಶ ಹಾಗೂ ಕ್ರಿಯೆಗಳು ಇಲ್ಲಿ ಏಕತ್ರಗೊಂಡಿವೆ ಎಂಬುದು ಇದನ್ನು ಈ ಕಾಲದ ಮುಖ್ಯ ಕೃತಿಯನ್ನಾಗಿಸಿದೆ.